ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಇವರಲ್ಲಿ ಡ್ರಾಫ್ಟ್ಸ್‌ಮನ್‌ಗಳ ಒಟ್ಟು ಸಂಖ್ಯೆ ೬೩೬ ಇದೆ ಅಂತ ಹೇಳಿದಿಯೇ ಹೊರತು ಬಡ್ತಿ ಕೊಟ್ಟಿದ್ದೇವೆಂದು ಹೇಳಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.— ಸ್ವಾಮಿ, ಪಿ. ಡಬ್ಲ್ಯು.ಡಿ. ೫೫೭ ಎಸ್.ಜಿ.ಪಿ ೬೬ನೇ ಕ್ರಮಾಂಕದ ೧೨ನೇಜೂನ್ ೧೯೬೯ನೇ ದಿನಾಂಕದ ಆದೇಶದ ಮೇರೆಗೆ ಆ ವರಿಗೆ ಬಡ್ತಿ ಕೊಡುವುದಕ್ಕೆ ಒಂದು ಸರ್ಕ್ಯುಲರ್ ಹೊರಡಿಸಿರುವುದು ನಿಜವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಆ ಜಿ. ಒ ತೆಗೆದುಕೊಂಡು ನೋಡಿದರೆ ಗೊತ್ತಾಗುತ್ತದೆ. ತಾವು ನೋಡದೇ ಇದ್ದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.— ತಾವು ಈ ಸಭೆಯಲ್ಲಿ ಆಷ್ಟು ಲಘವಾಗಿ ಹೇಳತಕ್ಕದ್ದು ಸರಿಯಲ್ಲ. ತಮ್ಮ ಸರ್ಕ್ಯುಲರ್ ಪ್ರಕಾರ ಈ ಡ್ರಾಫ್ಟ್ಸ್‌ಮನ್‌ಗಳಿಗೆ ಪ್ರಮೋಷನ್ ಪ್ರಮಾಣದಲ್ಲಿ ಬಡ್ತಿ ಕೊಟ್ಟಿರುವ ನೀತಿ ಸರಿಯಲ್ಲ ಎಂದು ಹೇಳಿದರೆ ಈ ರೀತಿ ನಮ್ಮನ್ನೆ ಜಿ. ಒ. ತೆಗೆದುಕೊಂಡು ನೋಡಿ ಎಂದು ಹೇಳುವುದು ಸರಿಯಲ್ಲ: ನಮಗೆ ಆ ರೀತಿ ಹೇಳುವುದಾದರೆ ನಮಗೆ ಜಿ. ಒ. ಕಾಪಿಯನ್ನು ಒದಗಿಸಿ ಕೊಡಿ ಎಂದು ಕೇಳಬೇಕಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಧ್ಯಕ್ಷರೆ ಇದು ಒಂದು ಸಂಪ್ರದಾಯ. ಯಾವುದು ಸರ್ಕಾರದ ಪ್ರಕಟಣೆಯಲ್ಲಿ ದೊರೆಯುತ್ತದೋ ಅದನ್ನು ಈ ಸಭೆಯಲ್ಲಿ ಕೊಡತಕ್ಕಂಥಾದ್ದು ಅನಗತ್ಯ ಎನ್ನುವುದು ಸರ್ಕಾರದ ಅಭಿಪ್ರಾಯ.

SRI A. G. KODAGI—What is the opinion of the Goverment about evolving a common designation to the Diploma Engineers(non-gradua tes) and Draughtsmen in P. W. D. because there are two categories?

SRI H. M. CHANNABASAPPA —The Ho . Member is not clear. But any way, if I have understood him, I want to tell him that Draughtsmen are different from Engineers. Drughtsmen have to do the duties and functions of Draughtsmen and Engineers have to do the duties and functions of Engineers.

MOSQUITO NUISANCE DUE TO BHADRA PROJECT

805. SRI N. G. HALAPPA (Channagiri).—Will the Minister for Health be placed to state.

(*a*) whether the Government is aware of the Mosquito menace due to Bhadra Project;

(*b*) if so, the action taken or proposed to be taken in the matter ?

SRI H. SIDDAVEERAPPA (Minister for Health).—

(*a*) No complaints have been received by Government about any unusual mosquito nuisance due to Bhadra Project.

(*b*) Does not arise.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ ತಾವು (ಅ) ಗೆ ಉತ್ತರವಾಗಿ No complaints have been received by Government about any unusual mosquito nuisance due to Bhadra Project ಎಂದು ಹೇಳಿದ್ದೀರಾ? ಹಾಗಾದರೆ ಯೂಷುಯಲ್ ಪೊಸ್ಕ್ಷಟೋ ಯಾವುದು ಎಂದು ಸರ್ಕಾರದ ಗಮನಕ್ಕೆ ಬಂದಿದೆ ?

† ಶ್ರೀ ಎಚ್. ಸಿದ್ದವೀರಪ್ಪ.—ನಾವು ಮಲಗುವುದಕ್ಕೆ ಹೋದಾಗ ನಮ್ಮನ್ನು ಕಡಿಯುವುದಕ್ಕೆ ಹೋಗುತ್ತದಲ್ಲಾ ಅದು ಯೂಫುಯಲ್ ಮೊಸ್ಕ್ವಿಟೋಸ್.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ಇದನ್ನು ಅಷ್ಟು ಲಘುವಾಗಿ ತಿಳಿದುಕೊಂಡ ಹಾಗೆ ಕಾಣುತ್ತದೆ. ಈ ಭದ್ರಾ ಯೋಜನೆಯಿಂದಾಗಿ ಅಲ್ಲಿರುವ ದನಗಳು ಸೊಳ್ಳೆಯಿಂದ ಕಚ್ಚಿಸಿಕೊಂಡು ಅದರ ರಕ್ತವೆಲ್ಲಾ ಹೀರಿ ಬಿಡುತ್ತದೆ. ಇದರ ಪರಿಣಾಮವಾಗಿ ವರ್ಷ ಒಂದಕ್ಕೆ ಒಂದು ಜೊತೆ ಎತ್ತು ಹೋಗುತ್ತಾ ಇದೆ. ಅದಕ್ಕಾಗಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಭದ್ರಾ ಕನ್‌ಸಲ್ಟೆಟೀವ್ ಕಮಿಟಿಯವರು ಒಂದು ರೆಸಲ್ಯೂಷನ್ ಪಾಸು ಮಾಡಿ ಕಳುಹಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಏನು ಕಾರ್ಯಕ್ರಮ ಕೈಗೊಳ್ಳುತೀರಾ?.

ಶ್ರೀ ಎಚ್. ಸಿದ್ದವೀರಪ್ಪ.—ದನಗಳಿಗೆ ಕಡಿಯುವ ಸೊಳ್ಳೆಯೇ ಬೇರೆ. ಜನಗಳಿಗೆ ಕಡಿಯುವ ಸೊಳ್ಳೆಯೇ ಬೇರೆ. I am aware of the nuisance and terrible havoc done to the animals in that area. ಅದು ಕಡಿದರೆ ಸರ್ ಅಂತ ರಕ್ತವೇ ಕೆಳಗೆ ಬಿದ್ದು ಬಿಡುತ್ತದೆ. ಅದರ ವಿಚಾರದಲ್ಲಿ ಏನು ಮಾಡಬೇಕು ಎಂದರೆ ಭದ್ರಾ ಅಷ್ಟೆಸರಿ ಕಮಿಟಿಯವರು., ಹೇಗಾದರೂ ಅವರಲ್ಲಿ ತಾವು ಒಬ್ಬರು ಮೆಂಬರ್ ಆಗಿದ್ದೀರಿ, ಇದರ ಬಗ್ಗೆ ವೆಟರ್ನರಿ ಡಿಪಾರ್ಟ್‌ಮೆಂಟಿನವರು ಸಲಹೆ ತೆಗೆದುಕೊಂಡು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಲಿ. ಈ ವಿಷಯ ದನಗಳ ಆರೋಗ್ಯ ಖಾತೆಗೆ ಸಂಬಂಧಪಟ್ಟದ್ದೇ ವಿನಾ ಜನಗಳ ಆರೋಗ್ಯ ಖಾತೆಗೆ ಸಂಬಂಧಪಟ್ಟದ್ದಲ್ಲ.

ಶ್ರೀ ಎನ್. ಜಿ. ಹಾಲಪ್ಪ.—ಹಾಗಾದರೆ ದನಗಳ ಆರೋಗ್ಯಕ್ಕೆನೇ ಬೇರೆ ಮಂತ್ರಿಗಳು ಇದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ವೆಟರ್ನರಿ ಇಲಾಖೆಗೆ ಸಂಬಂಧಪಟ್ಟಂತೆ ಅನಿಮಲ್ ಹಸ್ಬೆಂಡರಿ ಮಿನಿಸ್ಟರ್ ಅಂತ ಇದ್ದಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ, ಇತ್ತೀಚೆಗೆ ಪಟ್ಟಣದಲ್ಲೂ ಕೂಡ ವಿಪರೀತ ಸೊಳ್ಳೆಗಳು ಹೆಚ್ಚಾಗಿದೆ. ಮೊದಲು ಮುನಿಸಿಪಾಲಿಟಿಯವರು ಸೊಳ್ಳೆಗಳನ್ನು ನಾಶಪಡಿಸುವುದಕ್ಕಾಗಿ ತಕ್ಕ ಔಷಧಿಗಳನ್ನು ಸಿಂಪಡಿಸುತ್ತಾ ಇದ್ದರು. ಇತ್ತೀಚೆಗೆ ಅದನ್ನು ನಿಲ್ಲಿಸಿದ್ದಾರೆಂದು ಗೊತ್ತಾಗಿದೆ. ಆದುದರಿಂದ ಹಿಂದೆ ಇದ್ದ ಪದ್ಧತಿಯನ್ನೆ ಮುಂದುವರಿಸಿ ಸೊಳ್ಳೆಗಳನ್ನು ನಾಶಪಡಿಸುವಂತೆ ಸರ್ಕಾರದವರು ಮುನಿಸಿಪಾಲಿಟಿಗಳಿಗೆ ಆದೇಶ ಕೊಡುತ್ತಾರೆಯೇ?

ಶ್ರೀ ಎಚ್. ಸಿದ್ದವೀರಪ್ಪ—ಆದೇಶ ಕಳುಹಿಸುತ್ತೇನೆ. ಅದರ ಜೊತೆಗೆ ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ಮೊಸ್ಕ್ವಿಟೋ ನೊಸೆನ್ಸ್ ಬಹಳ ಜಾಸ್ತಿ ಆಗುತ್ತಾ ಇದೆ. ಇದು ಕೀಟಲೆ ಮಾಡುವ ಸೊಳ್ಳೆ. ಇದರ ಜೊತೆಗೆ ಮಲೇರಿಯ ಮೊಸ್ಕ್ವಿಟೋಸ್ ಬೇರೆ ಪುರುವಾಗಿದೆ. ಇದರ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದಾಕ್ಕಾಗಿ ಒಬ್ಬರು ಸ್ಪೆಷಲ್ ಆಫೀಸರನ್ನು ಜಾಯಿಂಟ್ ಡೈರಕ್ಟರ್ ಸ್ಟೇಟಸ್‌ನಲ್ಲಿರತಕ್ಕಂಥ ವರನ್ನು ನೇಮಿಸಿದ್ದೇವೆ. ಆದುದರಿಂದ ನಾವು ನೀವೂ ಇದರ ಬಗ್ಗೆ ತೀವ್ರವಾಗಿ ಯೋಚನೆ ಮಾಡಿ the nuisance of mosquitos will have to be eradicated. Necessary steps will be taken and instructions will be issued to the local bodies. We have got our own Health staff also there.

ಶ್ರೀ ಎನ್. ಜಿ. ಹಾಲಪ್ಪ.—ಸ್ವಾಮಿ, ಭದ್ರ ಕನ್‌ಸಲ್ಟೆಟೀವ್ ಕಮಿಟಿಯವರು ಈಗಾಗಲೇ ಇದರ ಬಗ್ಗೆ ಏನು ಮಾಡಬೇಕು ಎಂದು ತಿಳಿಸಿದ್ದಾರೆ. ಈಗ ಆ ಏರಿಯಾದಲ್ಲಿ ವರ್ಷಕ್ಕೆ ಒಂದೊಂದು ಜೊತೆಎತ್ತು ಹೋಗುತ್ತಾ ಇದೆ. ಆದುದರಿಂದ ಇದರ ಬಗ್ಗೆ ಸರ್ಕಾರದವರು ತೀವ್ರವಾಗಿ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಯೇ?

SRI H. SIDDAVEERAPPA.—Suitable instructions will be issued to the Department of Animal Husbandary to examine this question and see how best to help the area to be relieved of this nuisance.

MADAM SPEAKER.—I shall take up question No.834 of Sri Bangarappa later.